Belgaum Edition
NADOJA
Kannada Daily
3155, Khade Bazar
Belgaum (Karnataka)
Ph :(0831)2465263
Res:(0831)2451757
Fax: (0831)2424797,
Bijapur Office:
Office No.(08352)267835
Mobile: 9341212208
email-nadojadaily@yahoo.co.in
Simultaneously Published from
Belgaum & Bijapur
No,G-2/PMG/KA/NK/BM/531/2009-11
RNI No.RN 24992/73

ಬೆಳಗಾವಿ ಆವೃತ್ತಿ
ಮಂಗಳವಾರ
ಫೆಬ್ರುವರಿ ೯-೨-೨೦೧೦
ಪುಟಗಳು -೪
ಬೆಲೆ - ರೂ.೨.೦೦
ಸಂಪುಟ:೩೭
ಸಂಚಿಕೆ :೧೩೨
ಸಂಸ್ಥಾಪಕರು:
ದಿ:ಅರವಿಂದ ಜೋಶಿ
ಸಂಪಾದಕರು:
ರಾಘವೇಂದ್ರ ಜೋಶಿ

ಇಂದಿನ ಪಂಚಾಂಗ
ಮಂಗಳವಾರ
ದಿ.೯-೨-೨೦೧೦

ಶ್ರೀ ಶಾಲಿವಾಹನ ಶಕೆ ೧೯೩೧
ಉತ್ತರಾಯಣ, ವಿರೋಧಿನಾಮ ಸಂವತ್ಸರ, ಮಾಘ ಮಾಸ, ಕೃಷ್ಣಪಕ್ಷ
ತಿಥಿ:ಏಕಾದಶಿ
ನಕ್ಷತ್ರ:ಮೂಲಾ
ಚಂದ್ರರಾಶಿ: ಧನು
ರಾ.ಕಾಲ:೩.೦೦-೪.೩೦
ಗು. ಕಾಲ: ೧೨.೦೦-೧.೩೦
ಯ.ಕಾಲ:೯.೦೦-೧೦.೩೦
ಸೂರ್ಯೋದಯ:೬.೫೬
ಸೂರ್ಯಾಸ್ತ:೬.೩೪
ಗರಿಷ್ಠ : ೩೦.೪
ಕನಿಷ್ಠ :೧೩.೪
ತೇವಾಂಶ :೨೭ %

ಭೂ ಬಾಡಿಗೆ ಅವ್ಯವಹಾರ: ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆದೇಶ

ಬೆಳಗಾವಿ ೮- ಭೂ ಬಾಡಿಗೆ ಆಕರಣೆ ಹಗರಣಕ್ಕೆ ಸಂಬಂಧಿಸಿದಂತೆ ಅಧಿಕಾರಗಳ ವಿಚಾರಣೆಯನ್ನು ಆಯುಕ್ತರು ಕೈಗೊಂಡು ತಪ್ಪಿತಸ್ಥರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು. ಹಾಗೂ ಬರುವ ಮಾರ್ಚ್ ೩೧ರೊಳಗಾಗಿ ಭೂ ಬಾಡಿಗೆ ಆಕರಣೆಯ ಬಹಿರಂಗ ಹರಾಜಿಗೆ ಕ್ರಮ ಕೈಗೊಳ್ಳಬೇಕು ಎಂದು ಮಹಾಪೌರರು ಆದೇಶ ನೀಡಿದರು.

ಇಂದು ಬೆಳಿಗ್ಯೆ ಸಭೆ ಪ್ರಾರಂಭವಾಗುತ್ತಿದ್ದಂತೆ ಭೂ ಬಾಡಿಗೆ ವಸೂಲಾತಿ ಹರಾಜಿನ ವಿಷಯ ಚರ್ಚೆಗೆ ಬಂತು. ಕಂದಾಯ ಅಧಿಕಾರಿ ನಿಂಬಾಳ ಅವರು ಸದಸ್ಯರಿಗೆ ಈ ಬಗ್ಗೆ ಮಾಹಿತಿ ನೀಡಿದರು. ಬೆಳಗಾವಿ ಪಾಲಿಕೆ ಹದ್ದಿಯಲ್ಲಿ ಕಾಯಿಪಲ್ಲೆ ಮಾರಾಟಗಾರರು, ತಳ್ಳುವ ಗಾಡಿ ವ್ಯಾಪಾರಸ್ಥರು ಮೊದಲಾದವರಿಂದ ಬಾಡಿಗೆ ವಸೂಲಿಗೆ ೦೭-೦೮ನೆಯ ಸಾಲಿನಲ್ಲಿ ೭.೫೦ ಲಕ್ಷ ರೂ।ಗೆ ಟೆಂಡರ್ ನೀಡಲಾಗಿತ್ತು. ೨೦೦೮ರ ಅಗಸ್ಟ್‌ದಲ್ಲಿ ಅವಧಿ ಮುಗಿದಾಗ ಸ್ಥಾಯಿ ಸಮಿತಿಯ ಸೂಚನೆಯಂತೆ ಪ್ರತಿ ವರ್ಷಕ್ಕೆ ಶೇ.೫ ರ ಹೆಚ್ಚಳದೊಂದಿಗೆ ವಿವೇಕ ಪಾಟೀಲ ಅವರನ್ನೇ ಮುಂದುವರೆಸಲಾಯಿತು ಎಂದರು. ಈಗ ಸಭೆ ಹಣಕಾಸು ಹಾಗೂ ಇತರ ಅಧಿಕಾರಿಗಳ ಬಗ್ಗೆ ನಿರ್ಧಾರ ಕೈಗೊಳ್ಳಬೇಕಿದೆ ಎಂದರು.

ಲತೀಫ್ ಪಠಾಣ ಅವರು ಮಾತನಾಡಿ ಭೂ ಬಾಡಿಗೆ ವಸೂಲಾತಿ ಸಂಸ್ಥೆಯವರು ಎಲ್ಲಿ ಎಲ್ಲಿ ಬಾಡಿಗೆ ವಸೂಲಿ ಮಾಡಬಹುದು ಎಂಬ ಬಗ್ಗೆ ವಿವರಗಳು ಬೇಕು ಎಂದು ಆಗ್ರಹಿಸಿದರು. ಪ್ರತಿಯೊಂದು ವಾರ್ಡ ಅಥವಾ ವಿಭಾಗಗಳ ಪಟ್ಟಿಯನ್ನು ಅಧಿಕಾರಿಗಳು ಸಿದ್ಧಪಡಿಸಿದರೆ ಪಾಲಿಕೆಯ ಆದಾಯ ಹೆಚ್ಚಿಸಲು ಸಾಧ್ಯ ಎಂದರು. ರಾಜನ್ ಹುಲಭತ್ತೆ ಮಾತನಾಡಿ ವಿವೇಕ ಪಾಟೀಲ ಅವರಿಂದ ೨೦೦೮ ರಲ್ಲಿ ಪಡೆದ ೩.೫ ಲಕ್ಷ ಚೆಕ್‌ನ್ನು ಇನ್ನೂ ನಗದು ಮಾಡಿಲ್ಲ. ಈಗ ಆ ಚೆಕ್‌ಗೆ ಯಾವುದೇ ಬೆಲೆಯಿಲ್ಲ. ಕಳೆದ ಒಂದುವರೆ ವರ್ಷದಲ್ಲಿ ಪಾಲಿಕೆ ಎಷ್ಟು ಹಣವನ್ನು ವಿವೇಕ ಪಾಟೀಲ ಅವರಿಂದ ಪಡೆದಿದೆ ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಯಾಗಿ ಉತ್ತರಿಸಿದ ನಿಂಬಾಳ ಅವರು ಮಹಾನಗರ ಪಾಲಿಕೆ ವಿವೇಕ ಪಾಟೀಲ ಅವರಿಂದ ಇನ್ನೂ ಹಣ ವಸೂಲಿ ಮಾಡಿಲ್ಲ. ಸಭೆ ಕೈಗೊಳ್ಳುವ ನಿರ್ಧಾರದಂತೆ ಅಧಿಕಾರಿಗಳು ಭೂ ಬಾಡಿಗೆ ವಸೂಲಿ ಮಾಡುತ್ತಿರುವ ಪಾಟೀಲ ಅವರಿಂದ ಹಣ ಸಂಗ್ರಹಿಸುವರು ಎಂದರು.

ಆಗ ವಿರೋಧ ಗುಂಪಿನ ನಾಯಕ ಧನರಾಜ ಗವಳಿ ಮಾತನಾಡಿ ವರ್ಷಕ್ಕೆ ೭.೫ ಲಕ್ಷ ರೂ. ಬದಲಾಗಿ ೨೦ ಲಕ್ಷ ಕೇಳಿದರೆ ವಿವೇಕ ಪಾಟೀಲ ಅವರಿಂದ ಅಧಿಕಾರಿಗಳು ಸಂಗ್ರಹಿಸಲು ಸಾಧ್ಯವೇ? ಕಳೆದ ಒಂದೂವರೆ ವರ್ಷದಿಂದ ಅವರು ಕೊಡಬೇಕಾದ ಸುಮಾರು ೧೧.೫ ಲಕ್ಷ ರೂ. ಗಳಿಗೆ ಯಾವ ಅಧಿಕಾರಿ ಜವಾಬ್ದಾರಿ ಹೊರುತ್ತಾರೆ? ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಇದೊಂದು ಒಳ್ಳೆಯ ಉದಾಹರಣೆ ಎಂದರು. ಈಗ ಪಾಲಿಕೆ ೨೦೦೮ ನೆಯ ಸಾಲಿನಿಂದ ಹರಾಜು ಹಾಕುವ ನಿರ್ಣಯಕ್ಕೆ ಬಂದರೆ ಹಾಗೆ ಅಧಿಕಾರಿಗಳು ಮಾಡಲು ಸಾಧ್ಯವೇ? ಎಂದು ಖಾರವಾಗಿ ಪ್ರಶ್ನಿಸಿದರು.

ಈ ಮಧ್ಯೆ ಸಂಜಯ ಪ್ರಬು ಮಾತನಾಡಿ ಪಾಲಿಕೆಯ ರಸ್ತೆಗಳಲ್ಲಿ ವಿದ್ಯುತ್ ಕಂಬ ನೆಡಲು ಹೆಸ್ಕಾಂದವರು ಗ್ರಾಹಕರಿಂದ ಪ್ರತಿ ಕಂಬಕ್ಕೆ ೧೦೦ ರೂ. ಭೂ ಬಾಡಿಗೆ ಪಡೆಯುತ್ತಾರೆ. ಬೆಳಗಾವಿಯಲ್ಲಿ ಸುಮಾರು ೩೫ ಸಾವಿರ ವಿದ್ಯುತ್ ಕಂಬಗಳಿದ್ದು ಎಲ್ಲದಕ್ಕೂ ಪಾಲಿಕೆ ಭೂ ಬಾಡಿಗೆ ವಸೂಲು ಮಾಡಬೇಕು ಎಂದು ಆಗ್ರಹಿಸಿದರು. ಧನರಾಜ ಗವಳಿ ಮಾತನಾಡಿ ಮೊಬೈಲ್ ಟವರ್‌ಗಳು, ಕೇಬಲ್ ಟಿವ್ಹಿ, ಹೆಸ್ಕಾಂದವರಿಂದ ಭೂ ಬಾಡಿಗೆ ವಸೂಲು ೨೦೦೩ ರಲ್ಲಿಯೇ ಠರಾವು ಮಾಡಲಾಗಿದೆ. ಆದರೆ ಅಧಿಕಾರಿಗಳ ಬೇಜವಾಬ್ದಾರಿ ಠರಾವುಗಳು ಜಾರಿಯಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ರಾಜನ್ ಹುಲಬತ್ತೆ ಮಾತನಾಡಿ ಹೆಸ್ಕಾಂದವರು ಈವರೆಗೆ ಭೂ ಬಾಡಿಗೆ ಎಂದು ವಸೂಲು ಮಾಡಿರುವ ಹಣವನ್ನು ಪಾಲಿಕೆಗೆ ತುಂಬೇಕು ಎಂದರು.

(ಕೊನೆಯ ಪುಟಕ್ಕೆ)

ನಿರಂತರ ವಿದ್ಯುತ್ ಸಾಧ್ಯವಿಲ್ಲ-ಸಿಎಂ

ಶಿವಮೊಗ್ಗ ೮- ವಿಧಾನಸಭೆ ಚುನಾವಣೆ ವೇಳೆ ನಾಡಿನ ರೈತರಿಗೆ ಬಿಜೆಪಿ ಅಂದು ನೀಡಿದ್ದ ಭರವಸೆಯನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಇಂದು ತಳ್ಳಿ ಹಾಕಿದ್ದಾರೆ.

ಬಿಜೆಪಿ ಅಧಿಕಾರಕ್ಕೆ ಬಂದರೆ ರಾಜ್ಯದ ರೈತರಿಗೆ ಉಚಿತ ವಿದ್ಯುತ್ ಒದಗಿಸುವುದಾಗಿ ಪಕ್ಷದ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಯನ್ನು ಸಿಎಂ ಇಂದು ಸಾರಾಸಗಟಾಗಿ ತಿರಸ್ಕರಿಸಿದರು.

ರೈತರಿಗೆ ನಿರಂತರ ಉಚಿತ ವಿದ್ಯುತ್ ನೀಡುವ ಭರವಸೆಯನ್ನು ನಾನಾಗಲಿ ಅಥವಾ ಈ ಹಿಂದೆ ಇದ್ದ ಇಂಧನ ಸಚಿವರಾಗಲಿ ನೀಡಲಿರಲಿಲ್ಲ ಎಂದು ಅವರು ತಮ್ಮ ತವರು ಜಿಲ್ಲೆಯಲ್ಲೇ ರಾಗ ಬದಲಿಸಿದರು.

ಇಲ್ಲಿನ ಕೋಟೆ ಮಾರಿಕಾಂಬ ದೇವಾಲಯದಲ್ಲಿ ಇಂದು ವಿಶೇಷ ಪೂಜೆ ಸಲ್ಲಿಸಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ರೈತರಿಗೆ ಉಚಿತ ವಿದ್ಯುತ್ ನೀಡುವುದು ಸದ್ಯಕ್ಕೆ ಸಾಧ್ಯವಿಲ್ಲದ ಮಾತು ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ ದಿನದಿಂದ ದಿನಕ್ಕೆ ವಿದ್ಯುತ್ ಬೇಡಿಕೆ ಹೆಚ್ಚಾಗುತ್ತಿರುವುದರಿಂದ ಉಚಿತ ವಿದ್ಯುತ್ ನೀಡುವುದು ಆಗದ ಮಾತು. ಆದರೆ, ವಿದ್ಯುತ್ ಸಮಸ್ಯೆ ನೀಗಿಸಲು ಈಗಾಗಲೇ ಬೇರೆ ರಾಜ್ಯಗಳಿಂದ ವಿದ್ಯುತ್ ಖರೀದಿ ಮಾಡಲು ಸರಕಾರ ಕ್ರಮ ಕೈಗೊಂಡಿದೆ ಎಂದು ಅವರು ಹೇಳಿದರು.

ಬೇರೆ ಬೇರೆ ರಾಜ್ಯಗಳಿಂದ ೪.೫೦ ರೂ. ದರದಲ್ಲಿ ೨೮೦ ಮೆ.ವ್ಯಾಟ್ ವಿದ್ಯುತ್ ಖರೀದಿಸಲು ಸರಕಾರ ಮುಂದಾಗಿದೆ. ಇದರಿಂದ ಸಮಸ್ಯೆ ಇತ್ಯರ್ಥವಾಗುವುದೆಂಬ ಭರವಸೆಯನ್ನು ಅವರು ವ್ಯಕ್ತಪಡಿಸಿದರು.

ಶಾಲಾ ಮಕ್ಕಳಿಗೆ ಪರೀಕ್ಷೆ ಸಮೀಪಿಸುತ್ತಿರುವುದರಿಂದ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಲೋಡ್ ಶೆಡ್ಡಿಂಗ್ ಮಾಡುವ ಬಗ್ಗೆ ಶೀಘ್ರದಲ್ಲೇ ತೀರ್ಮಾನಿಸಲಾಗುವುದು. ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಯಡಿಯೂರಪ್ಪ ತಿಳಿಸಿದರು.

ಮುಸ್ಲಿಮ್ ಮೀಸಲಾತಿ: ಆಂಧ್ರ ಹೈಕೋರ್ಟಿನಿಂದ ರದ್ದು!

ಹೈದರಾಬಾದ್ ೮- ಮುಸ್ಲಿಮರಿಗೆ ಶೇ.೪ ರಷ್ಟು ಮೀಸಲಾತಿ ಕಲ್ಪಿಸಿದ್ದ ಆಂಧ್ರ ಪ್ರದೇಶ ಸರಕಾರದ ಆದೇಶವನ್ನು ರಾಜ್ಯ ಹೈಕೋರ್ಟ್ ಇಂದು ರದ್ದುಪಡಿಸಿದೆ.

ಧರ್ಮದ ಆಧಾರದಲ್ಲಿ ಮೀಸಲಾತಿ ಬೇಡ ಎಂದು ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಮುಸ್ಲಿಮರಿಗೆ ಮೀಸಲಾತಿ ಕಲ್ಪಿಸಬೇಕೆಂಬ ಶಿಫಾರಸುಗಳನ್ನು ಜಾರಿಗೊಳಿಸುವದು ಅಸಾಧ್ಯ ಎಂದು ಏಳು ಸದಸ್ಯರ ನ್ಯಾಯಪೀಠ ತೀರ್ಪು ನೀಡಿದೆ.

ವೈ.ಎಸ್. ರಾಜಶೇಖರ ರೆಡ್ಡಿ ನೇತೃತ್ವದ ಆಂಧ್ರ ಸರಕಾರ ಶಿಕ್ಷಣ ಮತ್ತು ಸರಕಾರಿ ಉದ್ಯೋಗದಲ್ಲಿ ಮುಸ್ಲಿಮ್ ಸಮುದಾಯದ ೧೫ ಹಿಂದುಳಿದ ಪಂಗಡಗಳಿಗೆ ಶೇ.೪ ರಷ್ಟು ಮೀಸಲಾತಿ ಕಲ್ಪಿಸಿ ೨೦೦೭ ರ ಜುಲೈ ೨೩ ರಂದು ಆದೇಶ ಹೊರಡಿಸಿತ್ತು.

೨೦೦೭ ರಲ್ಲಿ ರಾಜಶೇಖರ ರೆಡ್ಡಿ ಸರಕಾರ ಸಾಮಾಜಿಕ ಮತ್ತು ಶಿಕ್ಷಣಕ್ಕಾಗಿ ಹಿಂದುಳಿದ ಮುಸ್ಲಿಮ್ ವರ್ಗಗಳ ಕಾಯ್ದೆಯನ್ನು ಜಾರಿಗೊಳಿಸಿ ಮುಸ್ಲಿಮರಿಗೆ ಕಲ್ಪಿಸಿದ ಶೇ.೪ ರಷ್ಟು ಮೀಸಲಾತಿಯ ಸಂವಿಧಾನ ಬದ್ಧತೆ ಮತ್ತು ಕಾನೂನು ಬದ್ಧತೆಯನ್ನು ಪ್ರಶ್ನಿಸಿ ಹೈಕೋರ್ಟಿನಲ್ಲಿ ಹಲವಾರು ಅರ್ಜಿಗಳನ್ನು ಸಲ್ಲಿಸಲಾಗಿತ್ತು.

೨೦೦೭ ರಲ್ಲಿ ಐವರು ಸದಸ್ಯರ ನ್ಯಾಯಪೀಠವು ಪ್ರಕರಣದ ವಿಚಾರಣೆ ಆರಂಭಿಸಿತು. ಬಳಿಕ ೨೦೦೮ ರ ಜನವರಿಯಲ್ಲಿ ಅದನ್ನು ಏಳು ಸದಸ್ಯರ ನ್ಯಾಯಪೀಠಕ್ಕೆ ವರ್ಗಾಯಿಸಲಾಗಿತ್ತು.

ಸಂಭಾಜಿ-ನಿರ್ವಾಣಿ-ಶೆಟ್ಟಿ ನಡುವೆ ಚಕಮಕಿ

ಮೈಕ್ ಅವ್ಯವಸ್ಥೆಯಿಂದ ಸಭೆಯಲ್ಲಿ ಗೊಂದಲ

ಬೆಳಗಾವಿ ೮- ಮೈಕ್ ವ್ಯವಸ್ಥೆಯಲ್ಲಿಯ ಅವ್ಯವಸ್ಥೆಯಿಂದಾಗಿ ನಗರ ಸೇವಕರಲ್ಲಿ ಮಾತಿನ ಚಕಮಕಿ ನಡೆದು ಮಾರಾಮಾರಿ ಹಂತ ತಲುಪಿದ ಘಟನೆ ಇಂದು ಪಾಲಿಕೆಯ ಸಭೆಯಲ್ಲಿ ಜರುಗಿತು.

ಭೂ ಬಾಡಿಗೆ ಆಕರಣೆ ಕುರಿತು ಚಚೆರ ಮುಕ್ತಾಯದ ಹಂತದಲ್ಲಿದ್ದಾಗ ಮಹಾಪೌರ ಯಲ್ಲಪ್ಪ ಕುರಬರ ಅವರು ಸಭೆಯನ್ನು ಊಟಕ್ಕಾಗಿ ಮುಂದೂಡಿದರು. ಊಟದ ನಂತರ ಮಧ್ಯಾಹ್ನ ೩.೩೦ ಮತ್ತೆ ಸಭೆಯನ್ನು ಪ್ರಾರಂಭಿಸಿ ಆಗ ರೂಲಿಂಗ್ ನೀಡುವದಾಗಿ ಹೇಳಿ ಹೊರಟರು. ಸಭೆಯಲ್ಲಿ ನಡೆಯುತ್ತಿದ್ದ ಗದ್ದಲ-ಗೊಂದಲದ ನಡುವೆ ಬಹುತೇಕ ಸದಸ್ಯರಿಗೆ ಮಹಾಪೌರರು ಏನು ಹೇಳಿದರೆಂಬುದು ಕೇಳಿಸಲಿಲ್ಲ. ಬರಿ ಅವರು ಊಟದ ಕೈಸನ್ನೆ ಮಾಡಿದ್ದನ್ನು ಮಾತ್ರ ನೋಡಿ ಕೆರಳಿದರು.

ಮಹಾಪೌರರು ಕೇವಲ ಕೈಸನ್ನೆ ಮಾಡಿ ಎದ್ದು ಹೋಗಿದ್ದಾರೆ. ವಿಷಯದ ಬಗ್ಗೆ ರೂಲಿಂಗ್ ನೀಡಬೇಕಿತ್ತು.

(ಕೊನೆಯ ಪುಟಕ್ಕೆ)

ಪಾಲಿಕೆ ಸದಸ್ಯರು - ಅಧಿಕಾರಿಗಳ ಒಳ ಒಪ್ಪಂದ

ಪಾಲಿಕೆಗೆ ಲಕ್ಷಾಂತರ ಹಾನಿ

ಬೆಳಗಾವಿ ೮- ಪಾಲಿಕೆಯಲ್ಲಿ ಜರುಗುತ್ತಿರುವ ಕೆಲವು ಘಟನೆಗಳನ್ನು ಗಮನಿಸಿದರೆ ಅಧಿಕಾರಿಗಳು ಹಾಗೂ ಸದಸ್ಯರು ತಮ್ಮ ಲಾಭಕ್ಕಾಗಿ ಹೊಂದಾಣಿಕೆ ಮಾಡಿಕೊಂಡು ಪಾಲಿಕೆಯ ನಿಯಮಗಳನ್ನು ಗಾಳಿಗೆ ತೂರುತ್ತಿದ್ದಾರೆ ಎಂಬ ಭಾವನೆ ಸಾರ್ವಜನಿಕರಿಗೆ ಬರುತ್ತಿದೆ. ಕೆಲವು ಕಂತ್ರಾಟುದಾರರಿಗೆ ಅನುಕೂಲ ಮಾಡಿಕೊಡಲು ಪಾಲಿಕೆಗೆ ಲಕ್ಷಾಂತರ ರೂ.ಹಾನಿ ಆಗುವಂತಹ ಕ್ರಮಗಳನ್ನು ಕೈಗೊಂಡಿದ್ದಾರೆ.

ಆದರೆ ಪಾಲಿಕೆ ಸಭೆಯಲ್ಲಿ 'ನೀನು ಅತ್ತಂತೆ ಮಾಡು- ನಾನು ಸತ್ತಂತೆ ಮಾಡುತ್ತೇನೆ' ಎನ್ನುವಂತೆ ಸದಸ್ಯರು ಅಧಿಕಾರಿಗಳನ್ನು ಬಯ್ಯುತ್ತಾರೆ. ಅಧಿಕಾರಿಗಳು ಇಂತಹ ತಪ್ಪು ಇನ್ನೊಮ್ಮೆ ಆಗುವದಿಲ್ಲ ಎಂದು ಭರವಸೆ ಕೊಡುತ್ತಾರೆ. ನಂತರ ಮತ್ತೆ ಹಳೆಯ ಕಥೆ ಮುಂದುವರೆಯುತ್ತದೆ.

ಭೂ ಬಾಡಿಗೆ ಹರಾಜು ವಿಷಯದಲ್ಲಿ ೨೦೦೮ ರಲ್ಲಿ ಶೆ.೫ರ ದರ ಹೆಚ್ಚಳದೊಂದಿಗೆ ೩ ವರ್ಷ ಒಪ್ಪಂದವನ್ನು ಮುಂದುವರೆಸಲು ಅಧಿಕಾರಿಗಳು ಅನುಮೋದನೆ ಪಡೆದುಕೊಂಡರೂ ಅದನ್ನು ಪಾಲಿಕೆಯ ಸಭೆ ಧೃಡೀಕರಿಸುವ ಅಗತ್ಯವಿದೆ. ಆದರೆ ೨ ವರ್ಷಗಳ ನಂತರ ಈಗ ಅಧಿಕಾರಿಗಳು ಸಭೆಯ ಮುಂದೆ ಈ ವಿಷಯವನ್ನು ತಂದಿದ್ದಾರೆ ಎಂದು ಸದಸ್ಯರು ಇಂದಿನ ಸಭೆಯಲ್ಲಿ ಕಿಡಿಕಾರಿದರು.

ಅದರಂತೆ ಬೆಳಗಾವಿಯಲ್ಲಿರುವ ಜಾಹೀರಾತು ಫಲಕಗಳ ಬಾಡಿಗೆ ವಸೂಲಾತಿ ಒಪ್ಪಂದವೂ ೨೦೦೮ ರಲ್ಲಿ ಮುಗಿದಿತ್ತು. ೨೦೦೯ ರ ಜೂನ್ ೩೦ ರಂದು ಸಾರ್ವಜನಿಕ ಹರಾಜು ಈ ಕುರಿತು ನಡೆಯಬೇಕಿತ್ತು. ಆಗ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷರು ಹರಾಜನ್ನು ನಡೆಸದಂತೆ ಪತ್ರ ನೀಡಿದ್ದರಿಂದ ಈವರೆಗೆ ಹರಾಜು ನಡೆದಿಲ್ಲ. ಹಿಂದಿನ ಹರಾಜುದಾರರನ್ನೇ ಮುಂದುವರೆಸುವಂತೆ ಹಣಕಾಸು ಹಾಗೂ ತೆರಿಗೆ ಸ್ಥಾಯಿ ಸಮಿತಿ ಅಧಿಕಾರಿಗಳಿಗೆ ಸೂಚಿಸಿತು.

ಈ ಎರಡು ಘಟನೆಗಳಿಂದ ಅಧಿಕಾರಿಗಳು ಹಾಗೂ ಪಾಲಿಕೆಯ ಸದಸ್ಯರು ತಮ್ಮ ವೈಯಕ್ತಿಕ ಲಾಭಕ್ಕಾಗಿ ಹೊಂದಾಣಿಕೆ ಮಾಡಿಕೊಂಡು ಪಾಲಿಕೆ ಹಾಗೂ ಜನರ ಹಿತವನ್ನು ಕಡೆಗಣಿಸುತ್ತಿದ್ದಾರೆಂಬ ಭಾವನೆ ಜನಮನದಲ್ಲಿ ಮೂಡುತ್ತಿದೆ.

ಆರ್‌ಬಿಐ ಪ್ರಾದೇಶಿಕ ನಿರ್ದೇಶಕ ಶ್ರೀನಿವಾಸನ್ ಸಲಹೆ

ಕೃಷಿಕರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್ ಮೇಲೆ ಸಾಲ ನೀಡಿ

ಬೆಂಗಳೂರು ೮- ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಬ್ಯಾಂಕ್‌ಗಳು ಮುಂದಾಗಬೇಕೆಂದು ಆರ್‌ಬಿಐನ ಪ್ರಾದೇಶಿಕ ನಿರ್ದೇಶಕ ಶ್ರೀನಿವಾಸ್ ಇಂದಿಲ್ಲಿ ಸಲಹೆ ಮಾಡಿದರು.

೧೧೧ನೆ ರಾಜ್ಯಮಟ್ಟದ ಬ್ಯಾಂಕರ್‌ಗಳ ಸಮಿತಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕೃಷಿ, ಸಣ್ಣ ಉದ್ದಿಮೆದಾರರ ಹಾಗೂ ವಿದ್ಯಾರ್ಥಿಗಳಿಗೆ ಮುಂಗಡ ಸಾಲ ನೀಡಬೇಕೆಂದರು.

ಇತ್ತೀಚಿಗೆ ಸರಕಾರ ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡುತ್ತಿರುವ ಹಿನ್ನೆಲೆಯಲ್ಲಿ ಬ್ಯಾಂಕ್‌ಗಳು ಹೆಚ್ಚು ಆರ್ಥಿಕ ನೆರವು ನೀಡಬೇಕೆಂದರು. ಬ್ಯಾಂಕರ್‌ಗಳ ಸಮಿತಿ ಅಧ್ಯಕ್ಷ ಬಸಂತ್ ಸೇಠ್ ಮಾತನಾಡಿ, ಅರ್ಹತೆ ಇರುವ ಎಲ್ಲ ರೈತರನ್ನು ಕಿಸಾನ್ ಕಾರ್ಡ್ ವ್ಯಾಪ್ತಿಗೆ ಬ್ಯಾಂಕ್‌ಗಳು ತರಬೇಕು. ಅಲ್ಲದೆ, ೨೦೦೦ ಜನ ವಸತಿ ಇರುವ ಗ್ರಾಮಗಳಲ್ಲೂ ಬ್ಯಾಂಕ್ ಸ್ಥಾಪಿಸಬೇಕು. ಈ ಕಾರ್ಯ ೨೦೧೧ರ ಮಾರ್ಚ್ ವೇಳೆಗೆ ಪೂರ್ಣಗೊಳ್ಳಬೇಕೆಂದರು.

ಬ್ಯಾಂಕ್‌ಗಳ ಮೂಲಕ ರೈತರಿಗೆ ದೊರೆಯುವ ವಿವಿಧ ಸೌಲಭ್ಯಗಳ ಬಗ್ಗೆ ಜಾಗೃತಿ ಮೂಡಿಸಬೇಕು. ಜೊತೆಗೆ ಕಿಸಾನ್ ಪ್ರಯೋಜನದ ಬಗ್ಗೆ ಅರಿವು ಮೂಡಿಸುವ ಶಿಬಿರ ಆಯೋಜಿಸಬೇಕು. ಕೇಂದ್ರ, ರಾಜ್ಯ ಸರಕಾರಗಳು ನಗರ ವಾಸಿ ಬಡವರಿಗಾಗಿ ಜಾರಿಗೆ ತಂದಿರುವ ಬಡ್ಡಿ ಸಹಾಯ ಧನ ಯೋಜನೆಯಡಿ ಸಾಲ ನೀಡಬೇಕೆಂದರು.

ಕಾರ್ಯಕ್ರಮದಲ್ಲಿ ಕೇಂದ್ರ ಸರಕಾರದ ಹಣಕಾಸು ಇಲಾಖೆ ಅಧೀನ ಕಾರ್ಯದರ್ಶಿ ಎಂ.ಎನ್.ಆಜಾದ, ನಬಾರ್ಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಡಾ.ವೆಂಕಟೇಶ ಅಭಿವೃದ್ಧಿ ಆಯುಕ್ತ ಸುಧೀರ್, ಹರಿಸಿಂಗ್, ವಿವಿಧ ಇಲಾಖೆಯ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಬೆಳಗಾವಿ ಜಿ.ಪಂ. ದಲ್ಲಿ ಮೊದಲ ಬಾರಿ ಕನ್ನಡ- ಮರಾಠಿ ಭಾಷಾ ವಿವಾದ

ಲಂಚ ಆರೋಪ: ಜಿ.ಪಂ. ಪರಿಶೋಧಕ ಅಧಿಕಾರಿಗೆ ದೀರ್ಘ ಕಾಲದ ರಜೆ ಶಿಕ್ಷೆ

ಬೆಳಗಾವಿ ೮: ಸೋಮವಾರ ನಡೆದ ಜಿಲ್ಲಾ ಪಂಚಾಯತ ಸಾಮಾನ್ಯ ಸಭೆಯಲ್ಲಿ ಮೊದಲ ಬಾರಿಗೆ ಕನ್ನಡ ಮತ್ತು ಮರಾಠಿ ಸದಸ್ಯರ ಮಧ್ಯೆ ಮಾತಿನ ಚಕಮಕಿ ನಡೆಯಿತು.

ಸಭೆಯು ಪ್ರಾರಂಭವಾಗುತ್ತಿದ್ದಂತೆ ಎಂ.ಇ.ಎಸ್. ಜಿಲ್ಲಾ ಪಂಚಾಯತ ಸದಸ್ಯರು ನಮಗೆ ನೀಡಲಾದ ವಿಷಯ ಪತ್ರಿಕೆ ಕೇವಲ ಕನ್ನಡ ಭಾಷೆಯಲ್ಲಿದೆ. ಬೆಳಗಾವಿ ಜಿಲ್ಲೆಯಲ್ಲಿ ನಾವು ಭಾಷಾ ಅಲ್ಪ ಸಂಖ್ಯಾತರಾಗಿದ್ದೇವೆ. ಆದ್ದರಿಂದ ಕಾನೂನು ಪ್ರಕಾರ ನಮಗೆ ಮರಾಠಿ ಭಾಷೆಯಲ್ಲಿ ವಿಷಯ ಪತ್ರಿಕೆ ನೀಡಬೇಕೆಂದು ಆಗ್ರಹಿಸಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸದಸ್ಯ ಶಂಕರ ಮಾಡಲಗಿ, ಶ್ರೀಶೈಲ ತುಗಶೆಟ್ಟಿ ಅವರು ಜಿಲ್ಲಾ ಪಂಚಾಯತ ೧೯೮೬ ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಅಂದಿನಿಂದ ಇಂದಿನವರೆಗೆ ಆಡಳಿತವನ್ನು ಕನ್ನಡ ಭಾಷೆಯಲ್ಲಿಯೇ ನಡೆಸಲಾಗಿದೆ. ಮರಾಠಿಗರಿಗೆ ಕನ್ನಡ ಭಾಷೆ ಅರ್ಥವಾಗದಿದ್ದರೆ ರಾಷ್ಟ್ರೀಯ ಭಾಷೆ ಹಿಂದಿಯಲ್ಲಿ ಮಾಹಿತಿ ನೀಡಿ. ಆದರೆ ಮರಾಠಿಯಲ್ಲಿ ಮಾಹಿತಿ ನೀಡಬಾರದು ಎಂದು ಅವರು ಆಗ್ರಹಿಸಿದರು.

ಸಭೆಯಲ್ಲಿ ಸವದತ್ತಿ ಜಿಲ್ಲಾ ಪಂಚಾಯತ ಸದಸ್ಯರು ಮಾತನಾಡಿ ಎಂ.ಇ.ಎಸ್. ಸದಸ್ಯರಿಗೆ ಮರಾಠಿಯಲ್ಲಿ ಮಾಹಿತಿ ನೀಡುವುದಾದರೆ ನಮಗೆ ಉರ್ದು ಭಾಷೆಯಲ್ಲಿ ಮಾಹಿತಿ ನೀಡಬೇಕೆಂದು ಆಗ್ರಹಿಸಿದರು. ಜಿ.ಪಂ.ಸದಸ್ಯ ಡಾ।ರಾಜೇಂದ್ರ ಸಣ್ಣಕ್ಕಿ ಮಾತನಾಡಿ ಜಿಲ್ಲಾ ಪಂಚಾಯತ ಇದೊಂದು ಸ್ವತಂತ್ರ್ಯ ಸದನವಾಗಿದ್ದು ಇಲ್ಲಿ ಕನ್ನಡದಲ್ಲಿ ವ್ಯವಹಾರ ನಡೆಯುತ್ತ ಬಂದಿದೆ. ಇತ್ತಿಚಿಗೆ ಜಿಲ್ಲಾಧಿಕಾರಿಗಳು ಭಾಷಾ ಅಲ್ಪ ಸಂಖ್ಯಾತರಿಗೆ ಮರಾಠಿಗರಿಗೆ ಅವರ ಭಾಷೆಯಲ್ಲಿ ಮಾಹಿತಿ ಪತ್ರಗಳನ್ನು ನೀಡುವಂತೆ ಆದೇಶಿಸಿದ್ದಾರೆ. ಆದರೆ ಜಿಲ್ಲಾಧಿಕಾರಿಗಳ ಆದೇಶ ಜಿಲ್ಲಾ ಪಂಚಾಯತಿಗೆ ಅನ್ವಯಿಸುವುದಿಲ್ಲ. ಬೆಳಗಾವಿ ಜಿಲ್ಲೆಯಲ್ಲಿ ಮರಾಠಿಗರು ಶೇ.೨೦ ಕ್ಕಿಂತ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಅವರಿಗೆ ಕನ್ನಡ ತಿಳಿಯದಿದ್ದರೆ ಅವರು ಕನ್ನಡ ಭಾಷೆಯನ್ನು ಮರಾಠಿ ಭಾಷೆಗೆ ಅನುವಾದಿಸಿ ಮಾಹಿತಿ ತಿಳಿದುಕೊಳ್ಳಬೇಕೆಂದು ತಿಳಿಸಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ।ಏಕರೂಪ ಕೌರ ಅವರು ಈ ಬಗ್ಗೆ ಜಿಲ್ಲಾಧಿಕಾರಿಗಳ ಜೊತೆ ಚರ್ಚೆ ನಡೆಸಿ ತಿರ್ಮಾನ ಕೈಗೊಳ್ಳುವುದಾಗಿ ತಿಳಿಸಿದರು. ಅದಲ್ಲದೇ ತಮ್ಮ ಅನುಮತಿ ಇಲ್ಲದೇ ಯಾವುದೇ ಶಾಲಾ ಶಿಕ್ಷಕರನ್ನು ಅಮಾನತು ಮಾಡಬಾರದೆಂದು ಬೆಳಗಾವಿ ಹಾಗೂ ಚಿಕ್ಕೋಡಿ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಗೆ ಸೂಚನೆ ನೀಡಿದರು.

ಜಿ.ಪಂ. ಲೆಕ್ಕಾಧಿಕಾರಿಗೆ ದೀರ್ಘ ರಜೆ

ಜಿಲ್ಲಾ ಪಂಚಾಯತ ಲೆಕ್ಕ ಪರಿಶೋಧಕ ಅಧಿಕಾರಿ ಗ್ರಾಮ ಪಂಚಾಯತಿಗಳ ಲೆಕ್ಕ ಪರಿಶೋಧನೆ ಹೆಸರಿನಲ್ಲಿ ಕಾರ್ಯದರ್ಶಿಗಳಿಂದ ಲಂಚ ಕೇಳುತ್ತಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದು, ಅವರನ್ನು ತತ್‌ಕ್ಷಣ ದೀರ್ಘ ಕಾಲದ ರಜೆ ಮೇಲೆ ಹೋಗುವಂತೆ ಜಿಲ್ಲಾ ಪಂಚಾಯತ ಅಧ್ಯಕ್ಷೆ ಅಶ್ವಿನಿ ಪಾಟೀಲ ಅವರು ಆದೇಶ ನೀಡಿದ್ದಾರೆ.

ಸೋಮವಾರ ಬೆಳಿಗ್ಗೆ ಬೆಳಗಾವಿ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಪಂಚಾಯತ ಸದಸ್ಯರು ಹಿರಿಯ ಲೆಕ್ಕ ಪರಿಶೋಧಕ ಅಧಿಕಾರಿ ವಿರುದ್ಧ ಲಂಚತನದ ಆರೋಪ ಮಾಡಿದ ಹಿನ್ನಲೆಯಲ್ಲಿ ಅಧ್ಯಕ್ಷರು ಮೇಲಿನಂತೆ ಆದೇಶ ಹೊರಡಿಸಿದ್ದಾರೆ.

(ಕೊನೆಯ ಪುಟಕ್ಕೆ)

ರಾಥೋಡ್‌ಗೆ ಚೂರಿ ಇರಿತ!

ಚಂಡೀಗಢ ೮- ರುಚಿಕಾ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಶಿಕ್ಷಿತರಾಗಿರುವ ಹರ್ಯಾಣ ಮಾಜಿ ಡಿಜಿಪಿ ಎಸ್‌ಪಿಎಸ್ ರಾಥೋಡ್ ಅವರು ವಿಚಾರಣೆಯಾಗಿ ನ್ಯಾಯಾಲಯಕ್ಕೆ ಹಾಜರಾದಾಗ ಅವರ ವೇಳೆ ವ್ಯಕ್ತಿಯೊಬ್ಬ ಚಾಕುವಿನಿಂದ ದಾಳಿ ನಡೆಸಿದ ಘಟನೆ ಜರುಗಿದೆ.

ಕ್ಯಾಮರಾಮನ್ ವೇಷದಲ್ಲಿದ್ದ ಆರೋಪಿ ಚಾಕುವಿನಿಂದ ರಾಥೋಡ್ ಮೇಲೆ ಹಲ್ಲೆ ನಡೆಸಿದ್ದಾನೆ.

ಘಟನೆಯಲ್ಲಿ ರಾಥೋಡ್ ಅವರಿಗೆ ಸಣ್ಣಪುಟ್ಟಗಾಯಗಳಾಗಿವೆ. ಘಟನೆ ಸಂಭವಿಸಿದ ಕೂಡಲೇ ಪೋಲೀಸ್ ಸಿಬ್ಬಂದಿ ಆರೋಪಿಯನ್ನು ಹಿಡಿದು ವಶಕ್ಕೆ ತೆಗೆದುಕೊಂಡಿದ್ದಾರೆ. ಯಾವ ಕಾರಣಕ್ಕೆ ಹಲ್ಲೆ ನಡೆಸಲಾಗಿದೆ ಎಂಬುದು ತತ್‌ಕ್ಷಣದಲ್ಲಿ ತಿಳಿದು ಬಂದಿಲ್ಲ.

ಭಯೋತ್ಪಾದಕಿಯ ಬಂಧನ

ಉಗ್ರಗಾಮಿ ಚಟುವಟಿಕೆಯಲ್ಲಿ ಮಹಿಳೆಯರೂ ಶಾಮೀಲು

ಜಮ್ಮು ೮- ಭಯಾನಕ ಸಂಘಟನೆ ಹುಜಿ ಕಾರ್ಯಕರ್ತೆಯನ್ನು ಜಮ್ಮುವಿನ ಬಳಿ ಜಮ್ಮು- ಕಾಶ್ಮೀರದ ಪೋಲೀಸರು ಬಂಧಿಸಿದ್ದಾರೆ.

ಹಫೀಜಾ ಭಾನು (೨೭) ಬಂಧಿತ ಭಯೋತ್ಪಾದಕಿ. ನೋಡಲು ಅಮಾಯಕಳಂತಿರುವ ಈಕೆ ಭದ್ರತಾ ಪಡೆ ಕಾರ್ಯಾಚರಣೆ ವೇಳೆ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೂ ಈಕೆಯನ್ನು ಬಂಧಿಸುವಲ್ಲಿ ಭದ್ರತಾಪಡೆ ಯಶಸ್ವಿಯಾಗಿದೆ.

ಹಫೀಜಾ ತನ್ನ ಮಕ್ಕಳೊಂದಿಗೆ ದಿನಗೂಲಿಗೆ ಹೋಗುವಂತೆ ಸೋಗು ಹಾಕಿದ್ದಳು ಎಂದು ಜಮ್ಮು- ಕಾಶ್ಮೀರ ಪೋಲೀಸರು ತಿಳಿಸಿದ್ದಾರೆ.

ಭದ್ರತಾ ಪಡೆ ಸಿಬ್ಬಂದಿ ಕಾರ್ಯಾಚರಣೆ ಪ್ರಾರಂಭಿಸಿದಾಗಲೆಲ್ಲ ನಿಷೇಧಿತ ಹುಜಿ ಸಂಘಟನೆಯ ಕಾರ್ಯಕರ್ತರಿಗೆ ಮಾಹಿತಿ ನೀಡಿ ತಪ್ಪಿಸಿಕೊಳ್ಳಲು ಹಫೀಜಾ ನೆರವಾಗುತ್ತಿದ್ದಳು ಎಂದು ಪೋಲೀಸರು ಆರೋಪಿಸಿದ್ದಾರೆ.

ಕಳೆದ ವರ್ಷ ಐಎಸ್‌ಐ ಏಜೆಂಟ್ ಎಂಬ ಶಂಕೆಯಲ್ಲಿ ಆಸಿಯಾ ಮಲ್ಲಿಕ್ ಎಂಬ ಭಯೋತ್ಪಾದಕಿಯನ್ನು ಗಡಿ ಭದ್ರತಾ ಪಡೆಯೋಧರು ಬಂಧಿಸಿದ್ದರು.

ಗಡಿ ಭದ್ರತಾ ಪಡೆ ಯೋಧರ ಕಣ್ಗಾವಲನ್ನು ತಪ್ಪಿಸಿ ಒಳನುಸುಳಲು ಭಯೊತ್ಪಾದಕರು ಈ ಬಗೆಯ ತಂತ್ರಗಾರಿಕೆಯನ್ನು ರೂಪಿಸಿದ್ದಾರೆ. ಭದ್ರತಾ ಪಡೆ ರಾಜ್ಯಾದ್ಯಂತ ಕಟ್ಟೆಚ್ಚರ ವಹಿಸಿದ್ದು, ಬಂಡುಕೋರರನ್ನು ಬಂಧಿಸುವ ಕಾರ್ಯಾಚರಣೆ ಮುಂದುವರೆಸಿದೆ.

ಬಿಬಿಎಂಪಿ ಚುನಾವಣೆ: ಸರಕಾರಕ್ಕೆ ಕೋರ್ಟ್ ಮಂಗಳಾರತಿ !

ಬೆಂಗಳೂರು ೮- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ ವಿಚಾರದಲ್ಲಿ ಸರಕಾರ ಪದೇ ಪದೇ ಕೋರ್ಟ್‌ದಿಂದ ಮಂಗಳಾರತಿ ಮಾಡಿಸಿಕೊಳ್ಳುತ್ತಲೇ ಇದೆ. ಚುನಾವಣೆ ನಡೆಸಲು ಸರಕಾರಕ್ಕೆ ಆಸಕ್ತಿ ಇದ್ದಂತಿಲ್ಲ. ಕುಂಟು ನೆಪಗಳನ್ನು ಒಡ್ಡುತ್ತಾ ಚುನಾವಣೆಯನ್ನು ಮುಂದೂಡುವ ಪ್ರಯತ್ನವನ್ನೇ ನಡೆಸುತ್ತಿದೆ. ನಿಮ್ಮ ನಿಲುವು ಏನು ಎನ್ನುವದನ್ನು ನಾಳೆಯೊಳಗೆ ತಿಳಿಸಿ ಎಂದು ಸರಕಾರಕ್ಕೆ ಹೈಕೋರ್ಟ್‌ನ ವಿಭಾಗೀಯ ಪೀಠ ಇಂದು ಸ್ಪಷ್ಟ ಆದೇಶ ನೀಡಿದೆ.

ಫೆ. ೨೧ ಕ್ಕೆ ನಿಗದಿಯಾಗಿದ್ದ ಚುನಾವಣಾ ದಿನಾಂಕವನ್ನು ಕೋರ್ಟ್ ಗಮನಕ್ಕೂ ತಾರದೆ ಏಕಾಏಕಿ ರದ್ದುಪಡಿಸಿರುವ ನಿರ್ಧಾರ ಪ್ರಶ್ನಿಸಿ ಮೇಯರ್‌ಗಳು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಳ್ಳುವ ಹಂತದಲ್ಲೇ ಭಾರಿ ಗೊಂದಲ ಸೃಷ್ಟಿಯಾಗಿತ್ತು.

ನ್ಯಾಯಮೂರ್ತಿ ಮಂಜುಳಾ ಚೆಲ್ಲೂರ ಹಾಗೂ ಅಬ್ದುಲ್ ನಜೀರ ಅವರನ್ನೊಳಗೊಂಡ ವಿಭಾಗೀಯ ಪೀಠ ವಿಚಾರಣೆ ಮುಂದುವರೆಸಿ ಸರಕಾರ ಹಾಗೂ ಆಯೋಗವನ್ನು ತೀವ್ರ ತರಾಟೆಗೆ ತೆಗೆದುಕೊಂಡಿತು.

ಸರಕಾರದ ಪರ ವಕೀಲ ನಟರಾಜ್ ಹಾಗೂ ಆಯೋಗದ ಪರ ಫಣೀಂದ್ರ ತಮ್ಮ ವಿಸ್ತೃತ ವಾದ ಮಂಡಿಸಿದರಾದರೂ ಪೀಠಕ್ಕೆ ತೃಪ್ತಿಯಾಗಲಿಲ್ಲ. ಸುಖಾ ಸುಮ್ಮನೆ ವಾದ ಮಾಡುವದರಲ್ಲಿ ಅರ್ಥವಿಲ್ಲ. ಬಿಬಿಎಂಪಿ ಚುನಾವಣೆಗೆ ಮುಕ್ತಿ ಯಾವತ್ತು? ಸರಕಾರ ಚುನಾವಣೆಗೆ ಸಿದ್ಧವಿದೆಯೇ ಎಂಬುದರ ಬಗ್ಗೆ ಅರ್ಜಿ ಸಲ್ಲಿಸಿ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಿ ಎಂದು ಖಾರವಾಗಿ ಸೂಚಿಸಿತು.

ಪ್ರಕರಣದಲ್ಲಿ ಶೇ. ೫೦ರಷ್ಟು ವಾದ ಮಂಡಿಸಲು ಉಭಯ ವಕೀಲರು ಯಶಸ್ವಿಯಾಗಿದ್ದೀರಿ. ಈವರೆಗೂ ಸರಕಾರದ ನಿಲುವು ಸ್ಪಷ್ಟಗೊಂಡಿಲ್ಲ. ಗೋಡೆಗೆ ಚೆಂಡು ಹೊಡೆಯೋ ಕೆಲಸ ಬಿಟ್ಟು ಚುನಾವಣೆ ವಿಚಾರದಲ್ಲಿ ಸರಕಾರ ಒಂದು ನಿರ್ಧಾರಕ್ಕೆ ಬರಲಿ ಎಂದು ಇದೇ ವೇಳೆ ಪೀಠ ಸಲಹೆಯನ್ನೂ ನೀಡಿತು.

ಕ್ಷಮೆ ಕೇಳುವದಿಲ್ಲ ಶಾರುಖ ಪುನರುಚ್ಚಾರ

ಮುಂಬಯಿ ೮- ಪಾಕಿಸ್ತಾನಿ ಆಟಗಾರರ ಪರ ಸಹಾನುಭೂತಿಯ ಮಾತುಗಳನ್ನಾಡಿ ಶಿವಸೇನಯ ಕೆಂಗಣ್ಣಿಗೆ ಗುರಿಯಾಗಿದ್ದ ಬಾಲಿವುಡ್ ಸೂಪರ್ ಸ್ಟಾರ್ ಶಾರೂಖ್ ಖಾನ್ ತಾವು ಕ್ಷಮೆ ಕೇಳುವ ಅಗತ್ಯವಿಲ್ಲ ಎಂಬ ಮಾತನ್ನು ಪುನರುಚ್ಚರಿಸಿದ್ದಾರೆ.

(ಕೊನೆಯ ಪುಟಕ್ಕೆ)